**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.450/2026**

**ಪಿರ್ಯಾದಿ:** ಕರ್ನಾಟಕ ಸರ್ಕಾರ,
ಗೋಣಿಕೊಪ್ಪ ಪೋಲೀಸ್

ವಿರುದ್ಧ

**ಆರೋಪಿ** ಃ ಶ್ರೀ ರಾಯ್ ಎನ್.ಎಮ್,
ತಂದೆಃ ಪೌತಿ ಮುತ್ತಪ್ಪ ಎನ್.ಪಿ,
ಪ್ರಾಯ: 37 ವರ್ಷ,
ವಾಸ: ತಿತಿಮತಿ ನೋಕ್ಯಾ ಗ್ರಾಮ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ಆರೋಪಣೆ**

ಶ್ರೀ ಶ್ರೀನಾಥ್ ಎ, ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 03.03.2026 ರಂದು ಸಮಯ ಮಧ್ಯಾಹ್ನ 12.30 ಗಂಟೆಗೆ ಗೋಣಿಕೊಪ್ಪ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ತಿತಿಮತಿ ಬಸ್ ನಿಲ್ದಾಣದ ಬಳಿ ಆರೋಪಿಯಾದ ನೀವು ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಕೇರಳ ರಾಜ್ಯದ ಲಾಟರಿ ಡ್ರಾ ಫಲಿತಾಂಶದ ಆಧಾರದ ಮೇಲೆ ಅದೃಷ್ಟ ಸಂಖ್ಯೆಯನ್ನು ಬರೆದು ಕೊಟ್ಟು ಸಾರ್ವಜನಿಕರಿಂದ ಹಣವನ್ನು ಪಣವನ್ನಾಗಿರಿಸಿಕೊಂಡು ಜೂಜಾಟ ಆಡುತ್ತಿರುತ್ತೀರಿ ಎಂಬುದಾಗಿರುತ್ತದೆ, ಆ ಕಾರಣ ಕರ್ನಾಟಕ ಪೋಲೀಸ್ ಕಾಯ್ದೆ ಕಲಂ 78(1)(a)(vi) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

Sd/-

ದಿನಾಂಕ 11.06.2026
ಸ್ಥಳ: ಪೊನ್ನಂಪೇಟೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟ

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.450/2026**

**ಪಿರ್ಯಾದಿ** : ಕರ್ನಾಟಕ ಸರ್ಕಾರ,
ಗೋಣಿಕೊಪ್ಪ ಪೋಲೀಸ್,

**ವಿರುದ್ಧ**

**ಆರೋಪಿ** ಶ್ರೀ ರಾಯ್ ಎನ್.ಎಮ್,

**ಭಾ.ನ್ಯಾ.ಸು.ಸಂಹಿತೆ ಕಲಂ 275 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರಃ ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರಃ ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿಃ11.06.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

**Sd/-**

ದಿನಾಂಕಃ 11.06.2026
ಸ್ಥಳಃ ಪೊನ್ನಂಪೇಟೆ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ, ಪೊನ್ನಂಪೇಟೆ